ರಾಯರು ಕೈ ತೊಳೆದು ಬಂದರು. ಜಯಂತಿ ರಾಯರಿಗೆ ಡಾಕ್ಟ್ರು ನೀಡಿದ ಪ್ರಿಸ್ಕ್ರಿಪ್ಷನ್‌ಗೆ ಅನುಗುಣವಾಗಿ ಮಾತ್ರೆಗಳನ್ನು ಅವರ ಕೈಯಲ್ಲಿಟ್ಟಳು. ಆಮೇಲೆ, 'ಈಗ ನೀವು ಮತ್ತೆ ರೆಸ್ಟ್ ಮಾಡಿ. ಹೇಗೂ ನಾನು ಲೀವ್‌ನಲ್ಲಿ ಇದ್ದೇನೆ. ಸ್ವಲ್ಪ ಕಾಲೇಜಿನ ವರ್ಕ್ಸ್ ಪೆಂಡಿಂಗ್ ಇದ್ದು ಅದನ್ನು ಮುಗಿಸುತ್ತೇನೆ' ಎಂದಳು.

ರಾಯರು ಹಾಸಿಗೆಯಲ್ಲಿ ಬಿದ್ದುಕೊಂಡರೂ ಅವರಿಗೆ ನಿದ್ದೆ ಹತ್ತಲಿಲ್ಲ. ಮಂಪರೂ ಆವರಿಸಲಿಲ್ಲ. ಅವರು ಮೆಲ್ಲ ಎದ್ದು ಚಾವಡಿಗೆ ಬಂದು ಡೈನಿಂಗ್ ಟೇಬಲಿನ ಇದಿರು ಕುಳಿತು ಯಾವುದೋ ಬರವಣಿಗೆಯಲ್ಲಿ ತೊಡಗಿದ್ದ ಜಯಂತಿಯಾಚೆ ನೋಡಿ, ಹಜಾರದಲ್ಲಿದ್ದ ಕುರ್ಚಿಯಲ್ಲಿ ಕುಳಿತು ದಿನಪತ್ರಿಕೆಗಳನ್ನು ಓದತೊಡಗಿದರು.

ಸುಮಾರು ಹೊತ್ತಿನ ಮೇಲೆ ರಾಯರ ಮೊಬೈಲ್ ರಿಂಗಣಿಸಿತು. ಆ ಕಡೆಯಿಂದ ಸರೋಜಮ್ಮ 'ಏನು ನಿಮ್ಮಿಂದ ವಾರ್ತೆಯೇ ಇಲ್ಲ. ನೀವು ತಲುಪಿದ ತಕ್ಷಣ ಮಾತ್ರ ಫೋನು ಮಾಡಿದ್ದು ಬಿಟ್ಟರೆ, ಆಮೇಲೆ ನಿಮ್ಮ ಪತ್ತೆಯೇ ಇಲ್ಲ. ರಾತ್ರೆ ಹತ್ತು ಸಲ ನಿಮ್ಮನ್ನು ನಾನು ನೆನಪಿಸಿಕೊಂಡೆ. ನೀವು ನನ್ನನ್ನು ಮರೆತೇ ಬಿಟ್ಟು ಯಾರ ಜೊತೆಗೋ ಪಟ್ಟಾಂಗ ಹೊಡೆಯುತ್ತಿದ್ದೀರಿ ಅಂತ ಕಾಣುತ್ತದೆ' ಎಂದರು.

'ಹಾಗೇನಿಲ್ಲ ಸರೋಜ. ನಿನ್ನೆ ನಾನು ಹೋಟೆಲಲ್ಲಿ ಇದ್ದೆ. ನನ್ನ ಹಳೆಯ ಸ್ನೇಹಿತರೆಲ್ಲ ಬಂದು ರಾತ್ರೆ ಹನ್ನೊಂದು ಗಂಟೆತನಕ ಹರಟುತ್ತಾ ಇದ್ದೆವು. ನಡುನಡುವೆ ನಿನ್ನ ನೆನಪಾಗುತ್ತಿತ್ತು. ಆದ್ರೆ ಫೋನು ಮಾಡಬೇಕು ಅಂದರೆ, ಏನು ಎರಡು ದಿನವೂ ನಿಮಗೆ ಹೆಂಡತಿಯನ್ನು ಬಿಟ್ಟಿರಲಿಕ್ಕಾಗುವುದಿಲ್ಲವೇ ಎಂದು ಆ ಹಳೆಯ ಫ್ರೆಂಡ್ಸ್ ಅದರಲ್ಲೂ ವಿಶೇಷವಾಗಿ ಶಿವಶಂಕರ ಇದ್ದಾನಲ್ಲ, ಅವನು ಲೇವಡಿ ಮಾಡುತ್ತಾನೆ ಎಂದು ಸುಮ್ಮನಿದ್ದೆ'.

'ಸರಿ ಶಿವಶಂಕರ ಇದ್ದ ನಿಜ. ಆಮೇಲೆ ಮತ್ತೆ ಯಾರ್‍ಯಾರೆಲ್ಲ ಇದ್ರು?'

'ಅದೇ ರಮಾಕಾಂತ, ಚಂದ್ರಶೇಖರ, ನಾಗೇಶಪ್ರಭು, ರಾಮಣ್ಣ, ಶಿವಧ್ವಜ – ಹೀಗೆ ಒಂದು ದಂಡೇ ನುಗ್ಗಿ ನನ್ನ ರೂಮಿಗೆ ಬಂದಿದ್ದರು ಮಾರಾಯ್ತಿ, ಅವರಿಗೆ ಮೊನ್ನೆ ನಡೆದ ಘಟನೆ ಎಲ್ಲಾ ಹೇಳಿದೆ'.

'ಏನು ಅನಿಸಿತು ಅವರಿಗೆ? ಮತ್ತೆ ರಾಂಪುರಕ್ಕೆ ಬನ್ನಿ ಅಂದರೇನು ಅವರು?'

'ಹಾಗೇನೂ ಹೇಳಲಿಲ್ಲ. ಇಲ್ಲಿಂದ ಬಿಟ್ಟು ಹೋದದ್ದೇ ತಪ್ಪು ಅಂದ್ರು. ಅದಕ್ಕೆ ನಾನು ನಿನ್ನ ಹೆಲ್ತ್ ಪ್ರಾಬ್ಲಂನ ವಿಚಾರ ಹೇಳಿದೆ'.

'ಸರಿ ಈಗ ಎಲ್ಲಿದ್ದೀರಿ?'

'ಈಗ ಹೋಟೆಲಿನಲ್ಲೇ ಇದ್ದೇನೆ. ಒಮ್ಮೆ ಜಯಂತಿ ಮನೆಗೆ ಹೋಗಬೇಕೂಂತ ಯೋಚಿಸಿದ್ದೇನೆ. ಇವತ್ತು ಅಥವಾ ನಾಳೆ ಹೋಗುತ್ತೇನೆ'.

'ಹೋಗುವುದು ಬೇಡ ಎನ್ನುವುದಿಲ್ಲ ನಾನು! ಮತ್ತೆ ಅಲ್ಲೇ ಕ್ಯಾಂಪು ಗೀಂಪು ಹೊಡೀಬೇಡಿ. ಅದು ನನಗೆ ಇಷ್ಟವಿಲ್ಲ ನೆನಪಿಡಿ!'

'ಆಯ್ತು ಮಾರಾಯ್ತಿ, ಆಯ್ತು'.

ಇಷ್ಟು ಮಾತುಕತೆ ರಾಯರು ಮತ್ತು ಅವರ ಪತ್ನಿಯಲ್ಲಿ ನಡೆಯುತ್ತಿದ್ದ ಹಾಗೆ ತನ್ನ ಕೆಲಸ ಮುಗಿಸಿ ಹೊರಬಂದ ಜಯಂತಿ, 'ನಿಮ್ಮ ಮೇಡಂನಿಂದ ಫೋನು ಬಂತು ಅಂತ ಕಾಣುತ್ತದೆ' ಎಂದು ರಾಯರ ಇದಿರಿನ ಕುರ್ಚಿಯಲ್ಲಿ ಕುಳಿತಳು.

'ಹ್ಞೂ' ಎಂದು ಹ್ಞೂಂಗುಟ್ಟಿದ ರಾಯರು, 'ನಿನ್ನಲ್ಲಿ ನಾನು ಈ ರಾತ್ರೆ ಉಳಕೊಳ್ಳಬಾರದು ಅಂತ ಮೇಡಂನ ಆದೇಶ ಆಗಿದೆ!' ಎಂದರು ಗಂಭೀರವಾಗಿ.

ಜಯಂತಿ ಗೊಳ್ಳನೆ ನಕ್ಕು, 'ನನಗೆ ಗೊತ್ತು, ನಮ್ಮ ಅನೇಕ ಹೆಣ್ಮಕ್ಕಳಲ್ಲಿ ಇಂಥದ್ದೇ ದೌರ್ಬಲ್ಯಗಳಿವೆ ಎಂದು! ಅಫ್‌ಕೋರ್ಸ್, ನೀವು ಒಪ್ಪಿ ಅಥವಾ ಬಿಡಿ ಇಂಥ ತಪ್ಪು ಕಲ್ಪನೆಗಳನ್ನೆಲ್ಲ ಹೆಣ್ಣಿನ ತಲೆಯಲ್ಲಿ ತುಂಬಿಸಿದ್ದು ಪುರುಷಪ್ರಧಾನ ವ್ಯವಸ್ಥೆಯೇ! ಆದರೆ ಈಗ ಅನೇಕ ಹೆಣ್ಮಕ್ಕಳು ಇಂಥ ಮೀನ್‌ಮೆಂಟಾಲಿಟಿಯಲ್ಲಿ ಇಲ್ಲ! ಸ್ಸಾರಿ ಅಣ್ಣ, ನಾನು ನಿಮ್ಮ ಹೆಂಡತಿಯ ಬಗ್ಗೆ ಕಮೆಂಟ್ ಮಾಡಬಾರದಿತ್ತು' ಎಂದಳು. ರಾಯರು, 'ಸ್ಸಾರಿ ಯಾಕೆ? ನಮ್ಮ ಮದುವೆಯಾದಂದಿನಿಂದ ನನ್ನ ಮೇಲಿನ ಸಂಶಯ ಸರೋಜಳಲ್ಲಿ ಜಾಸ್ತಿಯಾಯಿತೇ ಹೊರತು ಕಮ್ಮಿಯಾಗಿಲ್ಲ' ಎಂದು ನಕ್ಕರು.

ಆಮೇಲೆ 'ನಾನು ಆಕೆಯನ್ನು ಯಾಕೆ ಹೀಗೆ ಯೋಚಿಸುತ್ತೀಯಾ ಎಂದು ಕೆಲವು ಸಲ ಕೋಪದಲ್ಲಿ ಮತ್ತು ಕೆಲವು ಸಲ ತಮಾಷೆಯಲ್ಲಿ ಕೆಣಕಿದ್ದಿದೆ. ಆಗ ಆಕೆ ಹೇಳಿದ್ದೇನು ಗೊತ್ತಾ? ಸೆಕ್ಸಿನ ವಿಚಾರದಲ್ಲಿ ನಾನು ಯಾವ ಗಂಡಸನ್ನೂ ನಂಬುವುದಿಲ್ಲ!'

ಜಯಂತಿ ಮೌನವಾದಳು. ರಾಯರೂ ಸ್ವಲ್ಪ ಹೊತ್ತು ಹೊರಗಿನ ಆಕಾಶವನ್ನು ದಿಟ್ಟಿಸಿ ನೋಡಿ ಆಮೇಲೆ, 'ನೋಡು ಜಯಂತಿ, ಇದೆಲ್ಲ ಒಂದು ರೀತಿಯ ಮನೋದೌರ್ಬಲ್ಯ. ಹಿಂದೆ ನಾನು ರಾಂಪುರದಲ್ಲಿ ಇರುವಾಗಲೇ ಒಮ್ಮೆ ಮನೋವೈದ್ಯರನ್ನು ಕಂಡು, 'ನನ್ನ ಹೆಂಡತಿಯಲ್ಲಿ ಇಂಥ ದೌರ್ಬಲ್ಯಗಳಿವೆ ಸರ್. ಏನು ಮಾಡಬಹುದು ಇದಕ್ಕೆ?' ಎಂದು ಪ್ರಶ್ನಿಸಿದ್ದೆ. ಆಗ ಅವರು, 'ನೀವು ಆಕೆಯನ್ನು ಕರೆದುಕೊಂಡು ಬಂದರೆ ನಾನು ಕೌನ್ಸೆಲಿಂಗ್ ಮಾಡಬಹುದು' ಎಂದಿದ್ದರು. ಆದರೆ ನನಗೆ ನನ್ನ ಹೆಂಡತಿಯಲ್ಲಿ ಈ ವಿಚಾರ ಪ್ರಸ್ತಾಪಿಸಲಿಕ್ಕೇ ಧೈರ್ಯಬರಲಿಲ್ಲ.

ಮನೋವೈದ್ಯರನ್ನು ನೋಡುವುದು ಅಂದರೆ ಹುಚ್ಚರಿಗೆ ಮಾತ್ರ ಎಂಬ ತಪ್ಪು ಅಭಿಪ್ರಾಯ ನಮ್ಮಲ್ಲಿದೆ. ಎಷ್ಟೋ ವೇಳೆ ಸಣ್ಣ ಪುಟ್ಟ ಸಮಸ್ಯೆಗಳನ್ನು ಸಹ ನಾವು ನಿವಾರಿಸಿಕೊಳ್ಳಲು ಆಗಲಿಲ್ಲವೆಂದಾದಾಗ ಮನೋವೈದ್ಯರನ್ನು ನೋಡಬೇಕು! ಅದು ಹೆಲ್ದಿ ಆಟಿಟ್ಯೂಡ್ ಎನ್ನುವುದು ನನ್ನ ನಂಬುಗೆ'.

ಜಯಂತಿಗೆ ಅದು ಹೌದೆನಿಸಿತು. ಆಕೆ 'ಅಣ್ಣ ನಾನು ನಿಜಕ್ಕೂ ನಿಮ್ಮನ್ನು ಕರೆಸಿದ್ದು ಈ ಉದ್ದೇಶಕ್ಕೇ! ನನ್ನ ಮಗಳು ಮತ್ತು ಅಳಿಯನ ನಡುವೆ ಸಮಸ್ಯೆ ಅಂದರೆ ಸಮಸ್ಯೆಯೇ ಅಲ್ಲದ ಸಮಸ್ಯೆ ಇರಬಹುದು. ನಾನು ಇಬ್ಬರಿಗೂ ಹಲವು ಬಾರಿ – ನೀವು ಯಾಕೆ ಒಟ್ಟಾಗಿ ಮನೋವೈದ್ಯರನ್ನು ಒಮ್ಮೆ ನೋಡಬಾರದು? ಎಂದು ಕೇಳಬೇಕೆಂದಿದ್ದೆ. ಆದರೆ ಯಾಕೋ ಅದು ನನ್ನಿಂದ ಆಗಲಿಲ್ಲ. ಅಲ್ಲದೆ ನನ್ನ ಈ ಮಾತನ್ನು ಇಬ್ಬರೂ ಋಣಾತ್ಮಕವಾಗಿ ತೆಗೆದುಕೊಂಡರೆ ಎಂದು ಭಯವಾಗಿತ್ತು! ಅಲ್ಲದೆ ಅವರಲ್ಲಿ ಇಲ್ಲದ ಸಮಸ್ಯೆ ನನ್ನ ಸಲಹೆಯಿಂದ ಮತ್ತಷ್ಟು ಉಲ್ಬಣವಾಗಬಹುದು ಅನಿಸಿ ನಾನು ಸುಮ್ಮನಾಗಿದ್ದೆ' ಎಂದಳು.

ಅಷ್ಟರಲ್ಲಿ ಸೀತಾಪುರದಿಂದ ಸದಾಶಿವ ಶೆಟ್ಟರ ಫೋನು ಬಂತು. ರಾಯರು 'ಹಲೋ' ಎನ್ನುತ್ತಾ 'ಹೇಗಿದ್ದೀರಿ?' ಎಂದು ಕುಶಲ ವಿಚಾರಿಸಿದರು.

ಶೆಟ್ಟರು 'ರಾಯರೇ, ಮೊನ್ನೆಯ ದಾಂದಲೆಗೆ ಕಾರಣ ಬೇರೆ ಯಾರೂ ಅಲ್ಲ. ನನ್ನ ದೊಡ್ಡಣ್ಣನೇ ಅಂತ ರುಜುವಾತಾಗಿದೆಯಂತೆ. ಇನ್ನು ಎಫ್.ಐ.ಆರ್. ಹಾಕುವುದು ಮಾತ್ರ ಬಾಕಿ ಎಂದು ಎಸ್.ಐ.ನಿನ್ನೆ ನನ್ನನ್ನು ಸ್ಟೇಶನ್ನಿಗೆ ಕರೆಸಿ ತಿಳಿಸಿದ್ದಾರೆ. ಎಸ್.ಐ. ಹೇಳುವ ಪ್ರಕಾರ ಮುಂದೆ ನಿಮಗಾಗಲೀ ನನಗಾಗಲೀ ತೊಂದರೆಗಳು ಆದರೆ, ಅದಕ್ಕೆ ನನ್ನಣ್ಣನೇ ಹೊಣೆಯಾಗುತ್ತಾರಂತೆ. ಆ ರೀತಿ ಅವರಿಂದ ಮುಚ್ಚಳಿಕೆ ಬರಿಸಿಕೊಳ್ಳೋಣ ಎಂದು ಹೇಳಿದ್ದಾರೆ' ಎಂದು ಹೇಳುತ್ತಾ 'ಅದಿರಲಿ ಈಗ ನೀವು ಎಲ್ಲಿದ್ದೀರಿ? ಹೇಗಿದ್ದೀರಿ?' ಎಂದು ವಿಚಾರಿಸಿದರು.

ರಾಯರು ತಾನು ಜಯಂತಿ ಅವರ ಮನೆಯಲ್ಲೇ ಇರುವುದಾಗಿ ತಿಳಿಸಿ ಬೆಳಗ್ಗೆ ಇದ್ದಕ್ಕಿದ್ದ ಹಾಗೆ ಆದ ಅಸ್ವಸ್ಥತೆಯನ್ನೆಲ್ಲ ಹೇಳಿದರು. ಆಮೇಲೆ ಪ್ರಾಯಶಃ ನಾನು ನಾಳೆಯೂ ರೆಸ್ಟ್ ಮಾಡಬೇಕಾಗುತ್ತದೆ ಎಂದು ಕಾಣುತ್ತದೆ. ನಾಡಿದ್ದು ನಾನು ಶಿವಪುರಕ್ಕೆ ಹೋಗಬೇಕು ಎಂದುಕೊಂಡಿದ್ದೇನೆ. ಅಲ್ಲಿ ಒಂದೋ ಎರಡೋ ದಿನ ಇದ್ದು ಜಯಂತಿಯ ಅಳಿಯ ಮತ್ತು ಮಗಳ ಸಮಸ್ಯೆಗೆ ಏನಾದರೂ ಪರಿಹಾರ ಸಾಧ್ಯವೋ ಎಂಬ ಪ್ರಯತ್ನ ಮಾಡುತ್ತೇನೆ. ಅದು ಸಾಧ್ಯ ಎನ್ನುವುದು ಜಯಂತಿಯ ನಿರೀಕ್ಷೆ', ಎಂದು ನಗುತ್ತಾ 'ಜಯಂತಿ ಇಲ್ಲೇ ನನ್ನ ಇದಿರೇ ಇದ್ದಾಳೆ, ಮಾತನಾಡುವುದಾದರೆ ಮಾತನಾಡಿ' ಎಂದು ಮೊಬೈಲನ್ನು ಜಯಂತಿಯ ಕೈಗೆ ಕೊಟ್ಟರು.

ಜಯಂತಿ ಲೋಕಾಭಿರಾಮವಾಗಿ ಶೆಟ್ಟರ ಕುಶಲ ವಿಚಾರಿಸಿ, 'ನಿಮ್ಮ ಅಣ್ಣನ ಹೋಟೆಲಿನ ವ್ಯವಹಾರ ಇಲ್ಲಿ ಪೂರ್ತಿ ಹಾಳಾಗಿದೆ ಶೆಟ್ಟರೇ. ಅದಕ್ಕೇ ಇರಬಹುದು, ನೀವಿರುವ ಜಮೀನನ್ನು ಮಾರಿ ಹಣ ಸಂಪಾದಿಸುವ ಆಸೆ ಅವರಿಗೆ' ಎಂದರು.

ಶೆಟ್ಟರು ಅದಕ್ಕೆ ಏನು ಉತ್ತರ ಕೊಟ್ಟರೆನ್ನುವುದು ರಾಯರು ಗಮನಿಸಲಿಲ್ಲ. ಅವರಿಬ್ಬರ ಮಾತುಕತೆ ಮುಗಿಯುತ್ತಿದ್ದಂತೆ ರಾಯರು ನಿಧಾನವಾಗಿ ಮೇಲೆದ್ದು ತನ್ನ ರೂಮಿಗೆ ತೆರಳಿ, ಅಲ್ಲಿದ್ದ ಕತೆಗಳ ಹಸ್ತಪ್ರತಿಗಳನ್ನು ಹಿಡಿದುಕೊಂಡು ಹೊರಬಂದು – 'ಕತೆಯಿಲ್ಲದ ಕತೆ ಕತೆಯಾಗುವ ಕತೆ' ಓದಿ ಮುಗಿಸಿದೆ ಜಯಂತಿ. ಇನ್ನೊಂದನ್ನು ಓದಬೇಕು ಅಂತ ಈಗ ಅನಿಸುತ್ತಾ ಇಲ್ಲ' ಎಂದವರೇ 'ರಾತ್ರೆ ಇಡೀ ನನ್ನ ಅಮ್ಮ ಮತ್ತು ಅವಳ ಒಟ್ಟು ಬದುಕಿನ ಬವಣೆಗಳೆಲ್ಲ ಸಿನಿಮಾದಲ್ಲಿ ಬಂದು ಹೋದ ಹಾಗೆ ಅರೆಮಂಪರಿನ ಸ್ಥಿತಿಯಲ್ಲಿ ನನ್ನೊಳಗೆ ಬಂದು ಹೋಯಿತು' ಎನ್ನುತ್ತಾ 'ನನ್ನ ಸ್ನಾತಕೋತ್ತರ ಪದವಿ ಮುಗಿಯುವ ಮೊದಲೇ ನನ್ನಮ್ಮ ನಿಧನಳಾಗಿದ್ದಳು. ಒಬ್ಬಂಟಿತನ ಅವಳನ್ನು ತುಂಬಾ ಕಾಡಿತ್ತು. ಅವಳು ಸಾಯುವ ಆರು ತಿಂಗಳ ಮೊದಲೇ ಗೋವಿಂದ ಭಟ್ಟರು ಅಂದರೆ ಗೊತ್ತಲ್ಲ.